ದಿನಾಂಕಃ 25.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಆರ್ ಎಸ್ ಬಿ ವಕೀಲರಿಂದಃ**

ನನಗೆ 70 ವರ್ಷ ವಯಸ್ಸು. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನಗೆ ಈಗ 50 ರಿಂದ 55 ವರ್ಷ ವಯಸ್ಸು ಇದ್ದರೂ ಸಹ 70 ವರ್ಷ ವಯಸ್ಸು ಇರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು 3ನೇ ತರಗತಿಯವರೆಗೆ ಓದಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ ನನಗೆ ನೆನಪಿಲ್ಲ.

ವಾದಿಯ ತಂದೆ ಸಿದ್ಧಪ್ಪ ಬಹಳ ವರ್ಷಗಳ ಹಿಂದೆ ತೀರಿಕೊಂಡಿರುತ್ತಾನೆ. ಸಿದ್ಧಪ್ಪನ ಹೆಂಡತಿ ಕೆಂಚವ್ವ ಸನ್ 2018 ರಲ್ಲಿ ತೀರಿಕೊಂಡಿರುತ್ತಾಳೆ. 1 ನೇ ಪ್ರತಿವಾದಿ ಮಾರುತಿ ಪಟ್ಯಾಳ ಇತನ ಹೆಂಡತಿ ಕೆಂಚವ್ವ ಸನ್ 2011 ರಲ್ಲಿ ತೀರಿಕೊಂಡಿರುತ್ತಾಳೆ. ವಾದಿಯ ಮದುವೆಯಾಗಿ 50 ವರ್ಷಗಳು ಆಗಿರಬಹುದು. ಅವಳನ್ನು ವಡೇಯರಹಟ್ಟಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ. ವಾದಿ ಮದುವೆ ಆದಾಗಿನಿಂದ ತನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತಾಳೆಂದರೆ ಸಾಕ್ಷಿಯು ಸ್ವಲ್ಪ ದಿನಗಳವರೆಗೆ ಮಾತ್ರ ವಾಸವಾಗಿದ್ದು, ನಂತರ ಗಂಡನ ಸಮೇತ ತನ್ನ ತವರು ಮನೆಗೆ ಬಂದು ವಾಸವಾಗಿದ್ದಾಳೆಂದು ನುಡಿಯುತ್ತಾರೆ. ವಾದಿಯ ಗಂಡ ಉದ್ದಪ್ಪನಿಗೆ ವಡೇಯರಹಟ್ಟಿ ಗ್ರಾಮದಲ್ಲಿ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಉದ್ದಪ್ಪನು ಹೆಂಡತಿಯ ಆಸ್ತಿಗಾಗಿ ಕೆಮ್ಮನಕೋಲ ಗ್ರಾಮಕ್ಕೆ ಬಂದು ವಾಸವಾಗಿದ್ದಾನೆ. ಸದರಿ ಉದ್ದಪ್ಪನಿಗೆ ವಡೇಯರಹಟ್ಟಿ ಗ್ರಾಮದಲ್ಲಿ ಆಸ್ತಿಗಳು ಇದ್ದರೂ ಸಹ ವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಹೆಂಡತಿ ಕೆಂಚವ್ವಳಿಗೆ ಮಕ್ಕಳು ಇರುವುದಿಲ್ಲ. ಸದರಿ ಕೆಂಚವ್ವಳಿಗೆ ಮಕ್ಕಳು ಆಗದೇ ಇರುವ ಬಗ್ಗೆ 1ನೇ ಪ್ರತಿವಾದಿಯ ತಂದೆ ತಾಯಿಗಳಿಗೆ ಗೊತ್ತಾಗಿ ಆತನಿಗೆ 2 ನೇ ಮದುವೆ ಮಾಡಿರುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದು

ಸದರಿ ಕೆಂಚವ್ವ ಗಂಡನ ಮನೆಗೆ ಹೋಗಿಯೇ ಇಲ್ಲ, ತವರು ಮನೆಯಲ್ಲಿಯೇ ವಾಸವಾಗಿದ್ದಳು ಎಂದು ನುಡಿಯುತ್ತಾರೆ. ಸದರಿ ಕೆಂಚವ್ವ 1 ನೇ ಪ್ರತಿವಾದಿಯ ಜೊತೆ ಬಾಳ್ವೆ ಮಾಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಕೆಂಚವ್ವಳಿಗೆ ದಾವಾ ಆಸ್ತಿಗಳಲ್ಲಿ ಒಂದು ಪಾಲು ಇರುತ್ತದೆಂದರೆ ನಿಜ. ಸಾಕ್ಷಿ ಮುಂದುವರೆದು ಅವಳು ತನ್ನ ತಂಗಿ ರೇಣುಕಾ ಹಾಗೂ ತಾಯಿ ಕೆಂಚವ್ವ ಇವಳಿಗೆ ತನ್ನ ಹಕ್ಕು ಬಿಟ್ಟು ಕೊಟ್ಟಿರುತ್ತಾಳೆಂದು ನುಡಿಯುತ್ತಾರೆ. ಸದರಿ ಹಕ್ಕು ಬಿಟ್ಟ ಪತ್ರವನ್ನು ಅವಳು ಸಾಯುವುದಕ್ಕಿಂತ ಒಂದೆರಡು ತಿಂಗಳುಗಳ ಮುಂಚೆ ಬರೆದುಕೊಟ್ಟಿರುತ್ತಾಳೆ. ಅವಳು ತೀರಿಕೊಂಡ ದಿನಾಂಕ ನನಗೆ ಹೇಳಲು ಆಗುವುದಿಲ್ಲ ಆದರೆ ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟ ಒಂದೆರಡು ತಿಂಗಳುಗಳ ನಂತರ ಮೃತಪಟ್ಟಿರುತ್ತಾಳೆ. ಎರಡೂ ಆಸ್ತಿಗಳಿಗೆ ಸಂಬಂಧಿಸಿದಂತೆ ತನ್ನ ಹಕ್ಕನ್ನು ಬಿಟ್ಟು ಕೊಟ್ಟಿರುತ್ತಾಳೆ. ವಾದಿ ಮತ್ತು ಅವಳ ತಾಯಿ ಕೆಂಚವ್ವ ಸೇರಿಕೊಂಡು ಮೃತ ಕೆಂಚವ್ವ ಪಟ್ಯಾಳ ಇವಳ ಆಸ್ತಿಯನ್ನು ಹೊಡೆಯಬೇಕೆಂಬ ದುರುದ್ದೇಶದಿಂದ ಖೊಟ್ಟಿ ಕಾಗದ ಪತ್ರವನ್ನು ಸೃಷ್ಟಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಕೆಂಚವ್ವ ತೀರಿಕೊಂಡ ನಂತರ ವಾರಸಾ ನಾತೆಯಿಂದ ಅವಳ ಗಂಡ 1 ನೇ ಪ್ರತಿವಾದಿಯ ಹೆಸರು ದಾಖಲು ಆಗಿರುತ್ತದೆಂದರೆ ನಿಜ. 1 ನೇ ಪ್ರತಿವಾದಿ ತನ್ನ ಹೆಸರು ದಾಖಲಿಸಿಕೊಂಡ ನಂತರ ಆ ಬಗ್ಗೆ ವಾದಿ ಮತ್ತು ಅವಳ ತಾಯಿ ಕೆಂಚವ್ವ ಸದರಿ ಡೈರಿಯನ್ನು ಪ್ರಶ್ನಿಸಿರುತ್ತಾರೆಂದರೆ ನಿಜ. ಸದರಿ ಮೇಲ್ಮನವಿ ವಜಾಗೊಂಡಿರುತ್ತದೆಂದರೆ ನಿಜ. ಸಾಕ್ಷಿ ಮುಂದುವರೆದು ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಳ್ಳುವಂತೆ ನಿರ್ದೇಶಿಸಿ ಸದರಿ ಮೇಲ್ಮನವಿ ವಜಾಗೊಂಡಿರುತ್ತದೆಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ನಿಜ. ಸದರಿ ಮೇಲ್ಮನವಿಯು ಸಹ ವಜಾಗೊಂಡಿರುತ್ತದೆಂದರೆ ನಿಜ. ಕೆಂಚವ್ವ ದಾವಾ

ಆಸ್ತಿಗಳಲ್ಲಿಯ ತನ್ನ ಪಾಲನ್ನು ಹಕ್ಕು ಬಿಟ್ಟ ಪತ್ರದ ಮೂಲಕ ವಾದಿ ಮತ್ತು ಅವಳ ತಾಯಿ ಕೆಂಚವ್ವಳಿಗೆ ಬಿಟ್ಟು ಕೊಟ್ಟಿರುತ್ತಾಳೆಂದು ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ